

# ಒಪ್ಪಂದಗಳಲ್ಲಿ ಪ್ರೀತಿ

ವಿವಾಹದಂತಹ ಒಂದು ಆತ್ಮೀಯ ಸಂಬಂಧದಲ್ಲಿ ಕಾನೂನಿಗೆ ಅನ್ವಯಿಸುವ ಒಪ್ಪಂದ ಎನ್ನುವ ಶಬ್ದವನ್ನು ಬಳಸುವುದು ಹಳೆಯ ತಲೆಮಾರಿನವರಿಗೆ ಬಹಳ ಶುಷ್ಕವಾಗಿ ಅಧಾರ್ಮಿಕವಾಗಿ ಅತಾರ್ಕಿಕವಾಗಿ ಕಾಣಬಹುದು. ವಿವಾಹದಲ್ಲಿ ಪ್ರೀತಿ ಇರಬೇಕಾಗಿರುವುದು ಮುಖ್ಯ ಎಂದು ಕೇಳುತ್ತ ಬೆಳೆದವರು ನಾವು. ಹಾಗಿದ್ದರೆ ಪ್ರೀತಿ ಎಂದರೆ ಏನು ಮತ್ತು ಹೇಗೆ ಮೂಡುತ್ತದೆ?

ಎಲ್ಲಾ ರಕ್ತಸಂಬಂಧಗಳಲ್ಲಿ ಅದರಲ್ಲೂ ಹೆಚ್ಚಾಗಿ ದಾಂಪತ್ಯದಲ್ಲಿ ಪ್ರೀತಿ ಸಹಜವಾಗಿ ಇದ್ದೇ ಇರುತ್ತದೆ. ಹಾಗಾಗಿ ಪ್ರೀತಿಯ ಕೊರತೆಯೇ ಜಗಳಗಳಿಗೆ ಕಾರಣ ಎನ್ನಿಸುವುದು ಸಹಜ. ಪ್ರೀತಿ ಎಂದರೆ ಮಾನಸಿಕವಾಗಿ, ಭಾವನಾತ್ಮಕವಾಗಿ ಹತ್ತಿರವಾಗುವುದು ಎಂದು ಸರಳವಾಗಿ ಹೇಳಬಹುದು. ಹೀಗೆ ಹತ್ತಿರವಾಗಲು ಒಡನಾಟದಿಂದ ಮಾತ್ರ ಸಾಧ್ಯವಾಗುತ್ತದೆ. ಮಕ್ಕಳು ಹೆಚ್ಚು ಒಡನಾಡುವವರಿಗೆ ಹತ್ತಿರವಾಗುವುದನ್ನು ನಾವು ನೋಡುತ್ತೇವೆ. ನಿರಂತರವಾಗಿ ಕಾರಾಗೃಹಗಳಲ್ಲಿ ಒಡನಾಡುವ ಕೈದಿಗಳ ನಡುವೆ ಕೂಡ ನಿಧಾನವಾಗಿ ಒಂದು ಮಟ್ಟದ ಪ್ರೀತಿ, ಆತ್ಮೀಯತೆ ಮೂಡುತ್ತದೆ. ಒಡನಾಟ ಹೆಚ್ಚಿದಷ್ಟೂ ಪ್ರೀತಿಯ ಆಳಅಗಲಗಳು ಹೆಚ್ಚುತ್ತವೆ. ಒಡನಾಟ ಎಂದರೆ ಕೇವಲ ಸಂಸಾರವನ್ನು ನಡೆಸಲು ಅಗತ್ಯವಿರುವ ಮಾತುಕತೆ ಮತ್ತು ಒಟ್ಟಾಗಿ ಬದುಕುವುದು ಇಷ್ಟೆಯೇ ಆಗಿದ್ದರೆ ದಾಂಪತ್ಯದಲ್ಲಿ ಪ್ರೀತಿ ಇದ್ದೇ ಇರುತ್ತದೆ ಎಂದು ಒಪ್ಪಿಕೊಳ್ಳಬಹುದಿತ್ತು. ಆದರೆ ಒಟ್ಟಾಗಿ ಬದುಕುವ ಎಷ್ಟೋ ದಂಪತಿಗಳು ಆತ್ಮೀಯವಾಗಿ ಒಡನಾಡುತ್ತಾರೆ ಎಂದು ಹೇಳಲು ಸಾಧ್ಯವಾಗುವುದಿಲ್ಲ. ಹಾಗಿದ್ದರೆ ದಾಂಪತ್ಯದ ನೈಜ ಒಡನಾಟ ಹೆಚ್ಚುವುದು ಯಾವಾಗ?

ಸಂಗಾತಿಗಳಿಗೆ ತಮ್ಮ ದೇಹ ಮನಸ್ಸುಗಳನ್ನು ಹಂಚಿಕೊಂಡು ಬದುಕಲು ಒಂದು ಸುರಕ್ಷಿತ ವಾತಾವರಣವಿದೆ ಎನ್ನಿಸಿದಾಗ ಇಬ್ಬರ ನಡುವಿನ ಆತ್ಮೀಯ ಒಡನಾಟ ಸಹಜವಾಗಿ ಹೆಚ್ಚುತ್ತದೆ ಮತ್ತು ಗಾಢವಾಗುತ್ತದೆ. ಸಂಬಂಧದಲ್ಲಿ ಇಬ್ಬರಿಗೂ ಒಂದು ಗೌರವದ ಸಮಾನ ಸ್ಥಾನವಿದೆ ಎನ್ನುವ ಅನುಭವವಾದಾಗ ಇಬ್ಬರೂ ತಮ್ಮ ಮನಸ್ಸಿನ ಆಳದ ಅನುಭವಗಳನ್ನು ಮುಕ್ತವಾಗಿ ಹಂಚಿಕೊಳ್ಳುವುದು ಸುರಕ್ಷಿತ ಎಂದುಕೊಳ್ಳುತ್ತಾರೆ. ಭಿನ್ನಾಭಿಪ್ರಾಯಗಳು ಹೆಚ್ಚಿದಷ್ಟೂ ಇಬ್ಬರ ಅಭದ್ರತೆಯ ಭಾವ ಹೆಚ್ಚಾಗುತ್ತದೆ. ಇದರಿಂದ ದೇಹಗಳನ್ನು ಹಂಚಿಕೊಳ್ಳುತ್ತಿದ್ದರೂ ಮನಸ್ಸುಗಳು, ಭಾವನೆಗಳು ದೂರ ಉಳಿಯುತ್ತವೆ. ಆದ್ದರಿಂದ ಭಿನ್ನಾಭಿಪ್ರಾಯಗಳನ್ನು ಸರಿಯಾಗಿ ಮತ್ತು ಸಮಯೋಚಿತವಾಗಿ ನಿಭಾಯಿಸುವುದು 21ನೇ ಶತಮಾನದ ವಿವಾಹಗಳಲ್ಲಿ ಬಹಳ ಪ್ರಮುಖ ಅಂಶವಾಗುತ್ತದೆ. ಸಮರ್ಥವಾಗಿ ಭಿನ್ನಾಭಿಪ್ರಾಯಗಳನ್ನು ನಿಭಾಯಿಸುವ ಒಪ್ಪಂದ ಒಡನಾಟ ಮತ್ತು ಪ್ರೀತಿಯನ್ನು ಹೆಚ್ಚಿಸುತ್ತದೆ.

ಭಿನ್ನಾಭಿಪ್ರಾಯಗಳನ್ನು ನಿಭಾಯಿಸುವುದು ಎಂದರೆ ಪರಿಹರಿಸುವುದು ಎಂದಲ್ಲ, ಭಿನ್ನಾಭಿಪ್ರಾಯಗಳಿದ್ದಾಗಲೂ ಆತ್ಮೀಯತೆಯನ್ನು ಉಳಿಸಿಕೊಳ್ಳುವುದು ಎಂದು!

ಪ್ರಜಾಪ್ರಭುತ್ವದಲ್ಲಿ ಕಾನೂನು ಮತ್ತು ನ್ಯಾಯಾಲಯಗಳು ಪ್ರಬಲವಾದ ನಿರ್ವಹಣಾ ಶಕ್ತಿ ಎಂದಾಯಿತಲ್ಲವೇ? ನ್ಯಾಯಾಲಯಗಳು ಏನನ್ನು ರದ್ದುಗೊಳಿಸಲು ಸಾಧ್ಯವಿದೆ? ಉತ್ತರ ನಿಮಗೆ ಗೊತ್ತೇ ಇದೆ, ಒಪ್ಪಂದಗಳನ್ನು! ಅಂದರೆ ಕಾನೂನಿನ ದೃಷ್ಟಿಯಲ್ಲಿ ವಿವಾಹವೂ ಒಂದು ಒಪ್ಪಂದವೇ ಆಯಿತಲ್ಲವೇ? ಎಲ್ಲಾ ವಿವಾಹಗಳನ್ನು ನೋಂದಣಿ ಮಾಡಿಸಬೇಕು ಎನ್ನುವ ಕಾನೂನನ್ನು ಜಾರಿಗೊಳಿಸುವ ಹಿಂದೆ ಕೂಡ ಇದೇ ಚಿಂತನೆ ಇರಬೇಕಲ್ಲವೇ? ಸಾಮಾಜಿಕವಾಗಿಯೂ ವಿವಾಹವನ್ನು ಒಂದು ಒಪ್ಪಂದ ಎಂದು ನಾವೆಲ್ಲಾ ನೋಡಿದರೆ ಹೇಗಿರಬಹುದು?

ಕೊಂಚ ಗಾಬರಿ, ವ್ಯಂಗ್ಯ, ಸಿಟ್ಟು ಎಲ್ಲವೂ ನಿಮ್ಮ ಮನಸ್ಸಿನಲ್ಲಿ ಮೂಡುತ್ತಿರಬೇಕಲ್ಲವೇ? ವಿವಾಹಗಳು ಎಲ್ಲಾ ಕಾಲಗಳಲ್ಲಿಯೂ ಒಂದು ರೀತಿಯ ಒಪ್ಪಂದವೇ ಆಗಿರುತ್ತಿತ್ತು ಎಂದರೆ ಆಶ್ಚರ್ಯ ಪಡಬೇಡಿ.

★ ರಾಜ ಮಹಾರಾಜರು ತಮ್ಮ ರಾಜ್ಯಗಳನ್ನು ರಕ್ಷಿಸಿಕೊಳ್ಳಲು ವಿಸ್ತರಿಸಲು ತಮ್ಮ ಮಕ್ಕಳಿಗೆ ಮದುವೆ ಮಾಡಿಸುತ್ತಿದ್ದರು. ಮಕ್ಕಳು ಚಿಕ್ಕವರಿರುವಾಗ ಅಥವಾ ಕೆಲವೊಮ್ಮೆ ಹುಟ್ಟುವ ಮೊದಲೇ (ನನಗೆ ಹೆಣ್ಣು ಮಗುವಾದರೆ ನಿನ್ನ ಮಗನಿಗೇ ಕೊಡುವುದು) ಎಲ್ಲವನ್ನೂ ನಿರ್ಧರಿಸಲಾಗುತ್ತಿತ್ತು. ಇವತ್ತಿನ ರಾಜಕಾರಣಿಗಳೂ ಇಂತಹ ಮಾದರಿಯನ್ನು ಪಾಲಿಸಲು ಉತ್ಸುಕರಾಗಿರುತ್ತಾರೆ.

★ ವ್ಯಾಪಾರೀ ವರ್ಗದ ಪೋಷಕರು ತಮ್ಮ ವೃತ್ತಿಗೆ ಅನುಕೂಲ ಆಗುವವರೊಡನೆ ಮಕ್ಕಳ ವಿವಾಹವನ್ನು ಏರ್ಪಡಿಸಲು ಪ್ರಯತ್ನಿಸುತ್ತಿದ್ದರು. ದೊಡ್ಡ ಕೈಗಾರಿಕೋದ್ಯಮಿಗಳಲ್ಲಿ ಇವತ್ತೂ ಕೂಡ ಮದುವೆಗಳು ಹೆಚ್ಚಾಗಿ ನಡೆಯುವುದು ಹೀಗೆಯೇ. ತಮ್ಮ ಆಯ್ಕೆಯನ್ನು ಒಪ್ಪದೆ ಯಾರನ್ನೋ ಪ್ರೀತಿಸಿ ಮದುವೆಯಾಗಲು ಪ್ರಯತ್ನಿಸಿದ ಶ್ರೀಮಂತರ ಮಕ್ಕಳು ಬಹಳ ತೊಂದರೆಗೆ